
# ಅಟೋಮೊಬೈಲ್ ಕನ್ನಡ ಪದಪಟ್ಟಿ






http://honalu.net

# ಮುನ್ನುಡಿ

ಗಾಲಿ, ಮನುಜ ಕಂಡುಹಿಡಿದ ಬಲು ಮುಕ್ಯವಾದ ವಸ್ತುಗಳಲ್ಲೊಂದು. ಕಾಲ ಕಳೆದಂತೆ ಗಾಲಿಯಿಂದ ಎತ್ತಿನ ಬಂಡಿ, ಕುದುರೆ ಬಂಡಿ, ಕಾರು, ಬಸ್ಸು, ಉಗಿಬಂಡಿ ಹೀಗೆ ಇಂದಿನ ಎಲ್ಲ ಸಾರಿಗೆಗಳು ಹುಟ್ಟಿಕೊಂಡವು. ಮೊದಲಿಗೆಲ್ಲಾ ಮನುಶ್ಯರ, ಪ್ರಾಣಿಗಳ ಕಸುವಿನಿಂದ ನಡೆಯುತ್ತಿದ್ದ ಸಾರಿಗೆಯ ಸಲಕರಣೆಗಳು, ಎಂಜಿನ್‌ಗಳನ್ನು ಕಂಡುಹಿಡಿಯುತ್ತಿದ್ದಂತೆ ತಮ್ಮಲ್ಲೇ ಕಸುವನ್ನು ಹೊಮ್ಮಿಸಿಕೊಳ್ಳುವಂತಾದವು. ತನ್ನಲ್ಲೇ ಕಸುವು ಹೊಮ್ಮಿಸುವ **ತಾನೋಡಗಳು** (automobiles) ಅಂದಿನಿಂದ ಎಲ್ಲೆಡೆ ಬಳಕೆಯಾಗತೊಡಗಿದವು.

ಸಾಗಾಟದ ಮಹತ್ವ ಹೆಚ್ಚುತ್ತಿದ್ದಂತೆ ಹೊಸ ಹೊಸ ಬಗೆಯ ಬಂಡಿಗಳನ್ನು (vehicles) ಹೊರತರುವ, ಅವುಗಳನ್ನು ಇನ್ನಶ್ಟು ಹದಗೊಳಿಸುವ ಕೆಲಸ ಮುಂಚೂಣಿಗೆ ಬಂದು, ಹಲವು ನಾಡುಗಳು ಈ ಕೆಲಸದಲ್ಲಿ ತೊಡಗಿಕೊಂಡವು. ಮುಂದುವರೆದ ನಾಡುಗಳಲ್ಲಿ ಈ ಹೊಸ ಕಲೆಯನ್ನು ಕಲಿಯುವ ಕೆಲಸ ಎಂದಿನಂತೆ ತಮ್ಮ ತಾಯ್ನುಡಿಯಲ್ಲೇ ಆಯಿತು. ಈ ಕವಲಿನಲ್ಲಿ ಹೊಸ ಪದಗಳನ್ನು ಕಟ್ಟುವ ಕೆಲಸವೂ ಆ ನಾಡುಗಳಲ್ಲಿ ತುಂಬಾ ಬಿರುಸಾಗಿ ನಡೆಯಿತು. ಜರ್ಮನ್ನರು, ಜಪಾನಿಗರು, ಪ್ರೆಂಚರು, ಇಟಾಲಿಯನ್ನರು, ಅಮೇರಿಕನ್ನರು ತಮ್ಮ ನುಡಿಯಲ್ಲೇ ತಾನೋಡದರಿಮೆಯನ್ನು ಕಟ್ಟಿಕೊಳ್ಳುತ್ತಾ ಜಗತ್ತಿಗೆ ತಮ್ಮ ಹೆಚ್ಚುಗಾರಿಕೆಯನ್ನು ಸಾರಿದರು. ಕನ್ನಡಿಗರಾದ ನಾವು ಕೂಡ ಆ ನಾಡುಗಳಂತೆ ನಮ್ಮದೇ ನುಡಿಯನ್ನು ಬಳಸಿ ಅರಿವನ್ನು ಹೊಮ್ಮಿಸುವ ಕೆಲಸದಲ್ಲಿ ತೊಡಗಿಕೊಳ್ಳಬೇಕಿತ್ತು. ಆದರೆ ಈ ವಿಶಯದಲ್ಲಿ ನಾವು ತುಂಬಾ ಹಿಂದಿದ್ದೇವೆ ಅನ್ನುವುದು ಯಾರಿಗಾದರೂ ಕಂಡೀತು.

ತಾನೋಡದ (automobile) ಕೈಗಾರಿಕೆಯಲ್ಲಿ ಕೆಲಸ ಮಾಡುತ್ತಿರುವ ನನಗೆ ತಾನೋಡಗಳ ಬಗ್ಗೆ ಹೆಚ್ಚಿನ ಆಸಕ್ತಿ. ಕನ್ನಡದಲ್ಲಿ ತಿಳಿದು ಇತರರಿಗೆ ತಿಳಿಸುವ ಹಂಬಲ ನನ್ನದು. ಕನ್ನಡದಲ್ಲಿ ಈ ಅರಿವು ಇಲ್ಲವಲ್ಲಾ ಅನ್ನುವ ಕೊರಗಿನಿಂದ, ಬರೆಯಲು ತೊಡಗಿದಾಗ ಎದುರಾದದ್ದೇ ಕನ್ನಡದಲ್ಲಿ ಈ ಕವಲಿಗೆ ಸಂಬಂದಿಸಿದ ಪದಗಳ ಕೊರತೆ. ಪದಗಳನ್ನು ತಡಕಾಡುತ್ತ ಈಗಿರುವ ಕೆಲವು ವಿಗ್ನಾನದ ನಿಗಂಟುಗಳನ್ನು ಒಳಹೊಕ್ಕಾಗ ಅವುಗಳಲ್ಲಿ ಹೆಚ್ಚಿನವು ತುಂಬಾ ತೊಡಕಾಗಿರುವ ಕನ್ನಡವಲ್ಲದ ಪದಗಳಾಗಿದ್ದವು.

ತಿಳಿಗನ್ನಡದಲ್ಲಿ ಸಾಯನ್ಸ್ ಮತ್ತು ಟೆಕ್ನಾಲಜಿ ಬರಹಗಳನ್ನು ಮೂಡಿಸುತ್ತಿರುವ ಹೊನಲು ಮಿಂಬಾಗಿಲಿಗೆ ಬರಹಗಳನ್ನು ಬರೆಯ ತೊಡಗಿದಾಗ, ಪದಗಳ ಈ ಕೊರತೆಯನ್ನು ನೀಗಿಸಿಕೊಳ್ಳುವಲ್ಲಿ ನಾನು ಇಡಬೇಕಾದ ಹೆಜ್ಜೆಗಳಾವವು ಅನ್ನುವುದು ಮನವರಿಕೆಯಾಯಿತು. ಆದಶ್ಟೂ ಕನ್ನಡದ ಬೇರು ಪದಗಳನ್ನು ಬಳಸಿ ಪದಗಳನ್ನು ಕಟ್ಟಿದರೆ, ತಿಳಿದುಕೊಳ್ಳುವುದು ತುಂಬಾ ಸುಲಬ ಅನ್ನುವುದು ನನ್ನ ಅನುಬವಕ್ಕೆ ಬಂತು. ಪದಗಳನ್ನು ಕಟ್ಟುವ ಈ ಕೆಲಸದಲ್ಲಿ ನನಗೆ ಪೇಸಬುಕ್‌ನಲ್ಲಿರುವ **ಪದ ಪದ ಕನ್ನಡ ಪದಾನೇ** ಗುಂಪು ತುಂಬಾ ನೆರವಾಯಿತು.

ಕಳೆದ ಸುಮಾರು ಎರಡು ವರುಶಗಳಿಂದ ಕನ್ನಡದಲ್ಲಿ ಅಟೋಮೊಬೈಲ್ ಕುರಿತು ಬರೆಯುತ್ತಿರುವ ನನಗೆ ಕನ್ನಡ ಪದಗಳಿಂದ ತುಂಬಾ ಸುಲಬವಾಗಿ ತಿಳುವಳಿಕೆಯನ್ನು ಹೊಮ್ಮಿಸಬಹುದೆಂದು ಮನದಟ್ಟಾಗಿದೆ ಹಾಗಾಗಿ ಕನ್ನಡದಲ್ಲಿ ಅಟೋಮೊಬೈಲ್ ಕುರಿತು ಈಗಾಗಲೇ ಬರೆಯುತ್ತಿರುವ, ಮುಂದೆ ಬರೆಯಬೇಕೆಂದಿರುವವರಿಗೆ ನೆರವಾಗಲೆಂದು ಈ ಪದಪಟ್ಟಿಯನ್ನು ಅಣಿಗೊಳಿಸಿರುವೆ.

ಈ ಪದಪಟ್ಟಿಯನ್ನು ಹೊರತರುವಲ್ಲಿ ಹಲವು ಮಂದಿಯ ದುಡಿಮೆಯಿದೆ. ಇದರಲ್ಲಿ ಮೊದಲಿಗೆ ನನ್ನ ಬರಹಗಳನ್ನು ತಿದ್ದಿ-ತೀಡಿ ತಕ್ಕ ಸಲಹೆ ನೀಡುತ್ತಾ ಬಂದಿರುವ ಹೊನಲಿನ ಅರಿಮೆಯ ಕವಲಿನ ಸಂಪಾದಕರಾದ ಪ್ರಶಾಂತ ಸೊರಟೂರ ಅವರಿಗೆ ನನ್ನ ವಂದನೆಗಳು. ಆಗಾಗ ನನ್ನೊಂದಿಗೆ ಮಾತನಾಡಿ ಪದಕಟ್ಟಲು ನೆರವಾದ ವಿವೇಕ್ ಶಂಕರ್, ಪ್ರಿಯಾಂಕ್ ಕತ್ತಲಗಿರಿ, ಬರತ್ ಕುಮಾರ್ ಅವರನ್ನು ಇಲ್ಲಿ ನಾನು ನೆನೆದುಕೊಳ್ಳಲೇಬೇಕು. ಹಾಗೆನೇ ಈ ಪದಪಟ್ಟಿಯ ಮರುನೋಟ ಮಾಡಿದ ಅನ್ನದಾನೇಶ್ ಸಂಕದಾಳ ಮತ್ತು ಅಂದವಾದ ಹೊರಪುಟ ಮಾಡಿದ ರತೀಶ ರತ್ನಾಕರ ಅವರಿಗೂ ನನ್ನ ನನ್ನಿಗಳು.

ಈ ಪದಪಟ್ಟಿಯಲ್ಲಿ ತೋರಿಸಲಾಗಿರುವ ಪದಗಳೇ ಕೊನೆ ಅಂತೇನೂ ಇಲ್ಲ. ಪದಗಳಲ್ಲಿ ತಿದ್ದುಪಡಿಗಳಿದ್ದರೆ, ಇನ್ನೂ ಚನ್ನಾಗಿರುವ ಆಯ್ಕೆಗಳನ್ನು ನೀಡಬಹುದೆಂದರೆ ತಪ್ಪದೇ ತಿಳಿಸಬಹುದು. ಕನ್ನಡದಲ್ಲಿ ಅರಿವು ಹೊಮ್ಮಿಸುವ ಇಂತಹ ಕೆಲಸದಲ್ಲಿ ಕನ್ನಡಿಗರು ಒಟ್ಟಾಗಿ ಕೆಲಸ ಮಾಡಬೇಕಿದೆ.

- **ಜಯತೀರ್ತ ನಾಡಗೌಡ.** ದಿನಾಂಕ: 03.08.2015

| ಎಣಿಕೆ | English | ಕನ್ನಡ |
|---|---|---|
| 1 | 2 stroke | ಇಬ್ಬಡಿತ |
| 2 | 2 wheeler | ಇಗ್ಗಾಲಿ |
| 3 | 3 wheeler | ಮುಗ್ಗಾಲಿ |
| 4 | 4 stroke | ನಾಲ್ಬಡಿತ |
| 5 | 4 wheeler | ನಾಲ್ಗಾಲಿ |
| 6 | absorber | ಹೀರುಕ |
| 7 | accelarator | ಹೆಚ್ಚುಕ, ಉರುಬುಹೆಚ್ಚುಕ |
| 8 | acceleration | ಉರುಬೇರಿಕೆ, ವೇಗಯೇರಿಕೆ |
| 9 | accessories | ನೆರವಿಗೆಗಳು |
| 10 | accessory belt | ನೆರವಿ ಪಟ್ಟಿ, ನೆರವಿನ ಪಟ್ಟಿ |
| 11 | aerodynamics | ಗಾಳಿಜರುಗುವಿಕೆ, ಗಾಳಿಕದಲಿಕೆ |
| 12 | air cleaner | ಗಾಳಿ ಚೊಕ್ಕ |
| 13 | air conditioning system | ಕುಳಿರುಪೆಟ್ಟಿಗೆ ಏರ್ಪಾಟು, ಗಾಳಿ ಪಾಡುಕದ ಏರ್ಪಾಟು |
| 14 | air drag | ಗಾಳಿ ಎಳೆತ |
| 15 | air pressure | ಗಾಳಿಯೊತ್ತಡ |
| 16 | air vent | ಗಾಳಿ ಕಂಡಿ, ಗಾಳಿ ತೂರೆವೆ |
| 17 | airbag | ಗಾಳಿಚೀಲ, ಕಾಪುಚೀಲ |
| 18 | air-cooled engine | ಗಾಳಿ ತಂಪಿನ ಬಿಣಿಗೆ |
| 19 | air-flow sensor | ಗಾಳಿ ಹರಿವಿನ ತಿಳಿಕ |
| 20 | All Terrain Vehicle (ATV) | ಎಲ್ಲ ಬಗೆಯ ಬಂಡಿ |
| 21 | All Wheel Drive (AWD) | ಎಲ್ಲ ಗಾಲಿಗಳ ಓಟ |
| 22 | alloy wheel | ಬೆರಕೆ ಗಾಲಿ |
| 23 | alternator | ಮಿಂಚುಟ್ಟುಕ |
| 24 | anti freeze | ಹೆಪ್ಪುತಡೆ |
| 25 | Anti lock Braking System (ABS) | ಸಿಲುಕದ ತಡೆತದ ಏರ್ಪಾಟು |
| 26 | anti-theft system | ಕಳವುತಡೆ ಏರ್ಪಾಟು |
| 27 | assembly | ಜೋಡಣೆ |
| 28 | autoignition | ತಾನುರಿತ |
| 29 | automatic | ತಂತಾನೆ |
| 30 | automatic door locks | ತಂತಾನೆ ಬಿಗಿಯುವ ಬಾಗಿಲುಗಳು |
| 31 | automatic parking | ತಂತಾನೆ ನಿಲುಗಡೆ |
| 32 | automatic transmission | ತಂತಾನೆಯ ಸಾಗಣೆ, ತನ್ನಿಡಿತದ ಸಾಗಣೆ |
| 33 | automobile | ತಾನೋಡ |
| 34 | autoshow | ತಾನೋಡದ ತೋರ್ಪು, ತಾನೋಡದ ತೋರ್ಕೆ |
| 35 | axle | ಇರಸು, ಗಾಲಿಕೋಲು, ತಿರುಗೋಲು |

| ಎಣಿಕೆ | English | ಕನ್ನಡ |
|---|---|---|
| 36 | back pressure | ಹಿನ್ನೊತ್ತಡ |
| 37 | balancer shaft | ಸರಿದೂಗುವ ಗುಣಿ |
| 38 | balancing | ಸರಿದೂಗುವಿಕೆ |
| 39 | battery | ಮಿಂಗೂಡು, ಗೂಡುಕಟ್ಟು, ಮಿಂಕಟ್ಟು |
| 40 | battery terminals | ಮಿಂಗೂಡು ತುದಿಗಳು |
| 41 | bearing | ತಾಳು |
| 42 | belt | ಪಟ್ಟಿ |
| 43 | belt tensioner | ಪಟ್ಟಿ ಬಿಗಿಯುಕ |
| 44 | bill of material | ಸರಕುಗಳ ಪಟ್ಟಿ |
| 45 | blind spot | ಕುರುಡುದಾಣ, ಕಾಣದ ತಾಣ |
| 46 | blow-by | ಉಗುಳು-ಗಾಳಿ, ಪಾರು ಗಾಳಿ |
| 47 | blower | ಊದುಕ, ಬೀಸುಕ |
| 48 | bonnet | ಬಿಣಿಗವಸು, ಮುಂತೆರಪು |
| 49 | boost pressure | ಏರು ಗಾಳಿಯೊತ್ತಡ |
| 50 | boost pressure sensor | ಏರು ಗಾಳಿಯೊತ್ತಡದ ತಿಳಿಕ |
| 51 | boot | ಹಿಂತೆರಪು, ಹಿಂಗೂಡು, ಸರಕುದಾಣ |
| 52 | boot space | ಸರಕು ಚಾಚಿಕೆ |
| 53 | bore | ದುಂಡು, ಕೊರೆ |
| 54 | brake | ಬಿರಿ, ತಡೆ, ತಡೆತ |
| 55 | brake fluid | ತಡೆಯ ಹರಿಕ |
| 56 | brake horse power | ಪಡೆವ ಕಸುವ, ಹೊಮ್ಮುವ ಕಸುವು |
| 57 | brake pad | ತಡೆತದ ಮೆತ್ತೆ |
| 58 | brake shoe | ತಡೆತದ ಮರೆ |
| 59 | bumper | ಡಿಕ್ಕಿ ಕಾಪು, ಡಿಕ್ಕಿ ತಡೆ |
| 60 | cable | ತಂತಿ, ಹೊರಜಿ |
| 61 | cam | ಉಬ್ಬುಕ |
| 62 | camber angle | ಓರೆಗೋನ, ಬಾಗುಗೋನ |
| 63 | camshaft | ಉಬ್ಬುಗುಣಿ |
| 64 | capacity | ಅಳವು |
| 65 | carburetor | ಉರುಗಾಳಿಬೆರಕ, ಉರುಗಾಳಿಕ |
| 66 | center lock | ನಡು ಬೀಗ, ಕಾಪು ಬೀಗ |
| 67 | chain | ಸರಪಳಿ, ಸರಪಣಿ |
| 68 | chain Tensioner | ಸರಪಳಿ ಬಿಗಿಯುಕ, ಸರಪಣಿ ಬಿಗಿಯುಕ |
| 69 | chassis | ಅಡಿಗಟ್ಟು |
| 70 | check lamp | ಒರೆ ದೀಪ, ತೊಡಕು ದೀಪ |

| ಎಣಿಕೆ | English | ಕನ್ನಡ |
|---|---|---|
| 71 | circlip | ಸುತ್ತುಹಿಡಿಕೆ, ಅರೆಹಿಡಿಕೆ |
| 72 | clutch | ಬೇರ್‍ವು, ಬೇರ್‍ವಡಕ |
| 73 | combustion | ಉರಿಯುವಿಕೆ, ಸುಡುವಿಕೆ |
| 74 | combustion bowl | ಉರಿಯುವಿಕೆಯ ಬಟ್ಟಲು, ಉರಿಬಟ್ಟಲು |
| 75 | combustion chamber | ಉರಿಯುವಿಕೆಯ ಕೋಣೆ, ಉರಿಗೋಣೆ |
| 76 | combustion delay | ಉರಿಯುವಿಕೆಯ ತಡವು |
| 77 | compact car | ಅಡಕ ಬಂಡಿ |
| 78 | compressed natural gas | ಅಡಕವಿರುವ/ಒತ್ತಾಗಿಸಿದ ಹುಟ್ಟಿನ ಆವಿ ( ಅ.ಹ.ಆ) |
| 79 | compression | ಒತ್ತುವಿಕೆ |
| 80 | compression ratio | ಒತ್ತುವಿಕೆಯ ಮಟ್ಟ |
| 81 | compressor | ಗಾಳಿಯೊತ್ತುಕ |
| 82 | connecting rod | ಕೂಡುಸಳಿ, ಕೂಡು ಸರಳು |
| 83 | converter | ಮಾರ್‍ವುಕ, ಮಾರ್‍ವಾಡುಕ |
| 84 | coolant | ತಂಪಿ, ತಣಿಚ |
| 85 | cooler | ತಂಪುಕ |
| 86 | crank | ತಿರು |
| 87 | crank case | ತಿರುಹೊದಿಕೆ |
| 88 | crank pin | ತಿರುಗಡ್ಡಿ, ತಿರು ಆಣಿ |
| 89 | crankshaft | ತಿರುಗುಣಿ |
| 90 | crash test | ಗುದ್ದು ಒರೆತ |
| 91 | cruise control | ಸುಯ್ ಅಂಕೆ |
| 92 | cubic capacity | ಅಳವಿಯ ಅಳತೆ, ಬಿಣಿಗೆಯಳತೆ |
| 93 | cycle | ಸುತ್ತು |
| 94 | cylinder | ಉರುಳೆ |
| 95 | cylinder head | ಉರುಳೆಯ ತಲೆ, ಉರುಳೆಯ ಮೇಲ್ಬಾಗ |
| 96 | cylinder liner | ಉರುಳೆಯ ಎಳೆ |
| 97 | damper | ಕುಗ್ಗಿಸುಕ, ಕುಗ್ಗಿ, ತಗ್ಗಿಸುಕ, ತಗ್ಗಿ |
| 98 | dashboard | ತೋರುಹಲಗೆ, ತೋರುಮಣೆ |
| 99 | dealer | ಹರದ, ಮಾರಾಳಿ, ಮಾರುಗ |
| 100 | deceleration | ಉರುಬಿಳಿಕೆ, ವೇಗಯಿಳಿಕೆ |
| 101 | deck | ಹಿಂದಾಣ,ತಾಣ |
| 102 | defogger | ಮಂಜುಗಳೆ, ಮಂಜಿಳಿಕ |
| 103 | diaphragm | ತೆಳುಪರೆ |
| 104 | differential | ಬೇರ್‍ವಾಟು |
| 105 | dip stick | ಅದ್ದು ಕಡ್ಡಿ, ಕೀಲೆಣ್ಣೆ ಕಡ್ಡಿ, ಮಟ್ಟದ ಕಡ್ಡಿ |

| ಎಣಿಕೆ | English | ಕನ್ನಡ |
|---|---|---|
| 106 | disc brake | ತಟ್ಟೆ ತಡೆತ |
| 107 | displacement | ಅಳತೆ, ಕದಲಿಕೆ |
| 108 | Double Overhead Camshaft (DOHC) | ಎರಡು ಮೇಲುಬ್ಬುಗುಣಿ |
| 109 | down force | ಕೆಳ ಬಲ |
| 110 | down payment | ಮೊದಲ ಸಂದಾಯ, ಮುನ್ ಸಂದಾಯ |
| 111 | drivability | ಓಡುತನ, ಓಡುಗಾರಿಕೆ, ಓಡಿಸುತನ |
| 112 | drive shaft | ನಡೆಸು ಗುಣಿ, ಓಡಿಸುವ ಗುಣಿ |
| 113 | drive train | ನಡೆಸುಸಾಲು, ಓಟದಸಾಲು |
| 114 | driver | ಓಡಿಸುಗ |
| 115 | drum brake | ತಮ್ಮಟೆ ತಡೆತ |
| 116 | efficiency | ಅಳವುತನ, ಬಲ್ಮೆ |
| 117 | emission | ಸೂಸುವಿಕೆ, ಸೂಸಿಕೆ, ಕೆಡುಗಾಳಿ |
| 118 | engine | ಬಿಣಿಗೆ |
| 119 | equipment | ಸಲಕರಣೆ |
| 120 | exhaust | ಹೊರಹಾಕುವಿಕೆ, ತೂರೆ, ತೂರೆಗಾಳಿ, ಸುಡುಗಾಳಿ |
| 121 | Exhaust Gas Recirculation (EGR) | ಸುಡುಗಾಳಿ ಒಳಕಳಿಸುವಿಕೆ |
| 122 | exhaust manifold | ಹೊರಹಾಕುವ ನಳಿಕೆ, ಸುಡುಗಾಳಿ ನಳಿಕೆ |
| 123 | exhaust valve | ಹೊರತೆರಪು |
| 124 | expanssion | ಹರಡುವಿಕೆ, ಹಬ್ಬುವಿಕೆ |
| 125 | external combustuion engine | ಹೊರ ಉರಿಯುವಿಕೆಯ ಬಿಣಿಗೆ |
| 126 | face lift | ಹೊಸದಾಗಿಸು, ಹೊಸತು |
| 127 | fan | ಬೀಸಣಿಕೆ, ಬೀಸಣಿಗೆ, ಬೀಸಣಿ |
| 128 | features | ಪರಿಚೆಗಳು,ಹೆಚ್ಚುಗಾರಿಕೆಗಳು |
| 129 | feed pump | ನೀಡೊತ್ತುಕ, ಮುನ್ನೊತ್ತುಕ |
| 130 | filter | ಸೋಸುಕ |
| 131 | filter element | ಜರಡಿ |
| 132 | fluid | ಹರಿಕ, ಹರಿಪು |
| 133 | flywheel | ಗಾಲಿತೂಕ |
| 134 | fog lamp | ಮಂಜುದೀಪ, ಇಬ್ಬನಿದೀಪ |
| 135 | forward gear | ಮುನ್ನಡೆ ಹಲ್ಗಾಲಿ |
| 136 | friction | ತಿಕ್ಕಾಟ, ಉಜ್ಜುವಿಕೆ |
| 137 | front grill | ಮುನ್ಕಂಬಿ ತೆರೆ, ಮುಂಗಟ್ಟು |
| 138 | Front Wheel Drive (FWD) | ಮುಂಗಾಲಿಗಳ ಓಟ |
| 139 | fuel | ಉರುವಲು, ಉರು |
| 140 | fuel Efficiency | ಉರುವಲು ಅಳವುತನ, ಬಲ್ಮೆ, ಉರು ಬಲ್ಮೆ |

| ಎಣಿಕೆ | English | ಕನ್ನಡ |
|---|---|---|
| 141 | fuel injection system | ಉರುವಲು ಚಿಮ್ಮುವ ಏರ್ಪಾಟು |
| 142 | gear | ಹಲ್ಲುಗಾಲಿ, ಹಲ್ಗಾಲಿ |
| 143 | gear box | ಹಲ್ಗಾಲಿ ಪೆಟ್ಟಿಗೆ |
| 144 | glove box | ಸರಕು ಗೂಡು, ಮುಂಗೂಡು |
| 145 | glow plug | ಬಿಸಿ ಬೆಣೆ |
| 146 | gradability | ಏರುವಿಕೆ, ಏರುವಳವು, ಹತ್ತುವಳವು |
| 147 | Gross Vehicle Weight (GVW) | ಬಂಡಿಯ ಒಟ್ಟಾರೆ ತೂಕ |
| 148 | ground clearance | ನೆಲದ ತೆರವು |
| 149 | gudgeon pin | ಆಡುಬೆಣೆಯ ಆಣಿ, ಕೂಡುಸಳಿಯ ಆಣಿ |
| 150 | hand brake | ಕೈತಡೆತ |
| 151 | handling | ಹಿಡಿತ, ನಡೆತ |
| 152 | head lamp | ಮುಂದೀಪ |
| 153 | head rest | ತಲೆ ಮೆತ್ತೆ |
| 154 | head rest/restraint | ತಲೆಯೊರಗು, ತಲೆಯೊರಕು, ತಲೆಯೂರುಕ |
| 155 | helmet | ತಲೆಗಾಪು, ತಲೆಕಾಪು |
| 156 | horse power | ಎಳೆತದ ಕಸುವು, ಕುದುರೆ ಕಸುವು |
| 157 | hybrid vehicle | ಬೆರಕೆಬಂಡಿ |
| 158 | ignition | ಉರಿತ, ಉರಿ |
| 159 | ignition coil | ಕಿಡಿ ಸುರುಳಿ, ಉರಿತದ ಸುರುಳಿ |
| 160 | ignition delay | ಉರಿತದ ತಡವು |
| 161 | immobilzer | ಕದಲುತಡೆ, ಕದಲ್ಗಾಪು, ಬಂಡಿಗಾಪು |
| 162 | indicated horse power | ತೋರುವ ಕಸುವು, ಒಳ ಕಸುವು |
| 163 | injection | ಚಿಮ್ಮುವಿಕೆ |
| 164 | injector | ಚಿಮ್ಮುಕ |
| 165 | instrument panel | ಅಳಕಗಳ ಹಲಗೆ |
| 166 | intake | ಒಳಗೆಳೆತ |
| 167 | Intake manifold | ಒಳಗೆಳೆತದ ನಳಿಕೆ |
| 168 | intake valve | ಒಳತೆರಪು |
| 169 | inter cooler | ನಡು ತಂಪಿಕೆ, ಗಾಳಿ ತಂಪಿಕೆ |
| 170 | internal combustuion engine (IC engine) | ಒಳ ಉರಿಯುವಿಕೆಯ ಬಿಣಿಗೆ |
| 171 | jack | ಎತ್ತುಗ, ಎತ್ತುಕ |
| 172 | kerb weight | ಗಾಡಿಯ, ಬಂಡಿಯ ತೂಕ |
| 173 | knob | ಬುಗುಟು, ಗುಂಡಿ |
| 174 | lamp | ಸೊಡರು, ದೀಪ |
| 175 | lane change indicator | ಸಾಲು ಬದಲಿಸುವ ತೋರುಕ |

| ಎಣಿಕೆ | English | ಕನ್ನಡ |
|---|---|---|
| 176 | leg room/space | ಕಾಲು ಚಾಚಿಕೆ |
| 177 | linkage | ಕೊಂಡಿಕೆ, ಸೇರಿಕೆ |
| 178 | Liquified Petroleum Gas (LPG) | ನೀರಾಗಿಸಿದ/ನೀರಿಸಿದ ಕಲ್ಲೆಣ್ಣೆಯ ಆವಿ (ನೀ.ಕಾ.ಆ) |
| 179 | load | ತೂಕ, ಹೇರು, ಹೊರು |
| 180 | load carrier | ಹೊರೆಬಂಡಿ |
| 181 | loading deck | ಹೇರುವ ತಾಣ, ಹೊರುವದಾಣ |
| 182 | lube oil | ಕೀಲೆಣ್ಣೆ, ನಯ ಎಣ್ಣೆ |
| 183 | manual Transmission | ಓಡಿಸುಗನಿಡಿತದ ಸಾಗಣಿ, ಕೈಹಿಡಿತದ ಸಾಗಣಿ |
| 184 | mechanical Efficiency | ಚೂಟಿಯ ಅಳವುತನ, ಚೂಟಿಯ ಬಲ್ಮೆ |
| 185 | mileage | ಮೈಲಿಯೋಟ |
| 186 | muffler | ಸದ್ದಡಗಿ, ಸದ್ದಡಕ |
| 187 | multi purpose vehicle | ಹಲ ಬಳಕೆಯ ಬಂಡಿ |
| 188 | multi utility vehicle | ಹಲ ಬಳಕೆಯ ಬಂಡಿ |
| 189 | naturally aspirated | ಒತ್ತದ ಹೀರುವಿಕೆ |
| 190 | navigation system | ತಲುಪುದಾರಿಯ ಏರ್ಪಾಟು |
| 191 | nozzle | ಮೂತಿ, ಅಂಜುಳಿ |
| 192 | odometer | ದೂರದಳಕ |
| 193 | oil drain | ಎಣ್ಣೆಗಳೆವೆ, ಎಣ್ಣೆಯಿಳಿಕೆ |
| 194 | oil rings | ಎಣ್ಣೆ ಉಂಗುರುಗಳು |
| 195 | oil-cooled engine | ಎಣ್ಣೆ ತಂಪಿನ ಬಿಣಿಗೆ |
| 196 | oil pan | ಎಣ್ಣೆ ಬಾಣಲೆ |
| 197 | overhead camshaft | ಮೇಲುಬ್ಬುಗುಣಿ |
| 198 | panel | ಪಡಿ, ಹಲಗೆ |
| 199 | parallel Hybrid | ಜೋಡಿ ಬೆರಕೆ |
| 200 | parking brake | ನಿಲುಗಡೆ ತಡೆತ, ನಿಲುತಡೆತ |
| 201 | passenger | ಪಯಣಿಗ |
| 202 | pay load | ಹೊರುವ ತೂಕ |
| 203 | pedal | ತುಳಿಗೆ |
| 204 | pedestrian Detection | ದಾರಿಹೋಕರ ಅರಿತ |
| 205 | pipe | ಕೊಳವೆ |
| 206 | piston | ಆಡುಬೆಣೆ |
| 207 | piston rings | ಆಡುಬೆಣೆಯ ಉಂಗುರಗಳು |
| 208 | platform | ನೆಲೆಗಟ್ಟು |
| 209 | pollutant | ಕೆಡುಪು, ಕೆಡಿಸುಕ |
| 210 | pollution | ಕೆಡುಕು, ಕೊಳಕು, ಹೊಲಸು, ಪುರುಡು |

| ಎಣಿಕೆ | English | ಕನ್ನಡ |
|---|---|---|
| 211 | potentiometer | ಒತ್ತಾಟ ಅಳೆಯುಕ |
| 212 | power | ಕಸುವು |
| 213 | power steering pump | ಮಿಂತಿಗುರಿ ಒತ್ತುಕ, ಮಿಂತಿಗುರೊತ್ತುಕ |
| 214 | power windows | ಮಿಂಕಿಂಡಿ, ಅಳವು ಕಿಂಡಿ, ಸುಳುಕಿಂಡಿ |
| 215 | powertrain | ಕಸುವಿನ ಸಾಲು, ಕಸುಸಾಲು, ಕಸುವಿನ ಗೂಡು |
| 216 | pressure | ಒತ್ತಡ |
| 217 | propeller | ತಳ್ಳುಕ, ಮುಂದೂಡುಕ |
| 218 | propeller shaft | ತಳ್ಳುಕದ ಗುಣಿ |
| 219 | pulley | ರಾಟೆ |
| 220 | pump | ಒತ್ತುಕ |
| 221 | push rods | ಒತ್ತು ಕಡ್ಡಿಗಳು, ತಳ್ಳು ಕಡ್ಡಿಗಳು |
| 222 | radiator | ಹೊರಸೂಸೂಕ, ಸೂಸುಕ |
| 223 | radiator fan | ತಂಪಿಯ ಬೀಸಣಿ |
| 224 | rear parking assist | ಹಿನ್ನಿಲುಗಡೆ ನೆರವಿ |
| 225 | rear view mirror | ಹಿನ್ನೋಟದ ಕನ್ನಡಿ |
| 226 | rear wheel drive (RWD) | ಹಿಂಗಾಲಿಗಳ ಓಟ |
| 227 | regenerative braking | ತಡೆತದ ಮರುಬಳಕೆ |
| 228 | reverse gear | ಹಿನ್ನಡೆ ಹಲ್ಗಾಲಿ |
| 229 | rim | ಬದಿ, ಅಂಚು, ಹೊರಸುತ್ತು |
| 230 | roof mounted antenna | ಏರಿಸಿದ ಅಲೆಪಿಡಿ, ಮಾಡು ಕೂರಿದ ಅಲೆಪಿಡಿ |
| 231 | running-in | ಹದಗೊಳಿಕೆ |
| 232 | safety belt | ಕಾಪುಪಟ್ಟಿ |
| 233 | seat belt | ಕೂರುಪಟ್ಟಿ |
| 234 | seat cover | ಕೂರು ಹೊದಿಕೆ |
| 235 | seat upholestry | ಕೂರಿರ್ಕೆ ಜವಳಿ, ಬಟ್ಟೆ |
| 236 | seating capacity | ಕೂರುವೆಡೆ, ಕೂರುವ ಎಣಿಕೆ,  ಕೂರುವ ಜಾಗ |
| 237 | sensor | ತಿಳಿಕ, ಅಳಕ, ಅರಿವುಕ |
| 238 | series Hybrid | ಸರಣಿ ಬೆರಕೆ |
| 239 | service Centre | ನೆರವು ತಾಣ, ಸರಿಪಡಿಕೆ ತಾಣ |
| 240 | service centre network | ನೆರವು ತಾಣ ಬಲೆ |
| 241 | shaft | ಗುಣಿ, ಮೂಕಿ, ನಡುಕಡ್ಡಿ |
| 242 | shock absorber | ಹೊಡೆತ ಹೀರುಕ |
| 243 | side view mirror | ಬದಿನೋಟದ ಕನ್ನಡಿ, ಬದಿಗನ್ನಡಿ |
| 244 | Single Overhead Camshaft (SOHC) | ಒಂದು ಮೇಲುಬ್ಬುಗುಣಿ |
| 245 | smoke | ಹೊಗೆ |

| ಎಣಿಕೆ | English | ಕನ್ನಡ |
|---|---|---|
| 246 | spark | ಕಿಡಿ |
| 247 | spark plug | ಕಿಡಿ ಬೆಣೆ |
| 248 | speed | ಉರುಬು, ವೇಗ |
| 249 | speedometer | ಓಟದಳಕ |
| 250 | sport utility vehicle | ಬಿರುಸು ಬಳಕೆಯ ಬಂಡಿ |
| 251 | sportive | ಬಿರುಸಿನ |
| 252 | start button | ಶುರು ಗುಂಡಿ, ತೊಡಗು ಗುಂಡಿ |
| 253 | starter motor | ಶುರು ಮಾಡುಕ, ಶುರು ಓಡುಕ |
| 254 | steering | ಹಿಡಿತ, ತಿಗುರಿ |
| 255 | stop button | ನಿಲುಗುಂಡಿ |
| 256 | stroke | ಬಡಿತ, ಹೊಡೆತ |
| 257 | suction | ಎಳೆದುಕೊಳ್ಳುವಿಕೆ, ಹೀರುವಿಕೆ |
| 258 | sump | ತೊಟ್ಟಿ |
| 259 | sunroof | ಬೆಳಕಿಂಡಿ, ಬೆಳಮಾಳಿಗೆ |
| 260 | super charger | ಕಸುದೂಡುಕ |
| 261 | suspension system | ತೇಲಿಕೆ, ತೂಗಿಕೆ, ಕದಲೇರ್ಪಾಟು |
| 262 | tail lamp | ಹಿಂದೀಪ |
| 263 | terminals | ತುದಿಗಳು |
| 264 | test drive | ಒರೆಯೋಟ, ಒರೆತದೋಟ |
| 265 | thermostat | ಬಿಸುಪುಹಿಡಿತ, ಬಿಸುಹಿಡಿಕೆ, ಬಿಸುಪಿಡಿ |
| 266 | timing belt | ಹೊತ್ತು ಪಟ್ಟಿ, ತೆರೆ ಪಟ್ಟಿ |
| 267 | torque | ತಿರುಗುಬಲ, ಸೆಳೆಬಲ, ಸೆಳೆಮೆ, ತಿರುಮೆ |
| 268 | torque convertor | ತಿರುಗುಬಲ ಮಾರ್ಪುಕ |
| 269 | touch screen | ಸೋಕು ತೆರೆ |
| 270 | track front | ಮುಂದಿನ ದಾರಿಯಗಲ |
| 271 | track rear | ಹಿಂದಿನ ದಾರಿಯಗಲ |
| 272 | Traction Control System (TCS) | ಹಿಡಿತದ ಅಂಕೆಯ ಏರ್ಪಾಟು |
| 273 | tractor | ಉಳುಬಂಡಿ |
| 274 | transaxle | ಸಾಗಣಿರಸು, ಸಾಗಣಿ ತಿರುಗೋಲು |
| 275 | transmission | ಸಾಗಾಟ, ಸಾಗಣಿ |
| 276 | turbine | ತಿರುಗಾಲಿ, ಬೀಸುಗಾಲಿ |
| 277 | turbo charged | ಒತ್ತಿದ ಹೀರುವಿಕೆ, ಒತ್ತಿದುಂಬಿದ |
| 278 | turbo charger | ಗಾಳಿದೂಡುಕ |
| 279 | turbo lag | ತಿರುಗಾಲಿ ಹಿನ್ನಡೆ |
| 280 | turn indicator | ತಿರುವು ತೋರುಕ |

| ಎಣಿಕೆ | English | ಕನ್ನಡ |
|---|---|---|
| 281 | turning radius | ತಿರುಗಿಸುವ ದುಂಡಿ, ತಿರುಗಿಸುವ ಮಟ್ಟ, ತಿರುಗರೆ |
| 282 | twin turbo | ಜತೆ ದೂಡುಕ, ಅವಳಿ ದೂಡುಕ |
| 283 | valve | ತೆರಪು |
| 284 | vacuum pump | ಬರಿದು ಒತ್ತುಕ |
| 285 | vehicle | ಬಂಡಿ, ಗಾಡಿ |
| 286 | valvetrain | ತೆರಪಿನ ಸಾಲು |
| 287 | vehicle | ಬಂಡಿ, ಗಾಡಿ |
| 288 | viscous fan | ಜಿಗುಟು ಬೀಸಣಿ |
| 289 | volume | ಅಳವಿ |
| 290 | volumetric Efficiency | ಅಳವಿಯ ಅಳವುತನ , ಅಳವಿಯ ಬಲ್ಮೆ |
| 291 | washer | ಬಿಗಿಬಿಲ್ಲೆ |
| 292 | waste gate | ಬಿಡುಕಿಂಡಿ, ತೊರೆಕಿಂಡಿ |
| 293 | water jacket | ನೀರಿನ ಹೊದಿಕೆ |
| 294 | water pump | ನೀರೊತ್ತುಕ |
| 295 | water-cooled engine | ನೀರು ತಂಪಿನ ಬಿಣಿಗೆ |
| 296 | wheel | ಗಾಲಿ |
| 297 | wheel base | ಗಾಲಿಗಳ ಅಡಿಪಾಯ, ಗಾಲಿಗಳ ದೂರ |
| 298 | wind screen | ಮುಂತೆರೆ, ಗಾಳಿತೆರೆ |
| 299 | wind shield | ಗಾಳಿ ಕಾಪು |
| 300 | wiper | ಒರೆಸು, ಒರೆಸುಕ |